# ಭಾವಪೂಜಾ

ಶ್ರೀಮತಿ ಶಶಿಕಲಾ

ಸತ್ಯ ಪ್ರಾಮಾಣಿಕತೆ ಮುಂತಾದ ಸದ್ಗುಣಗಳ ಮೂಲಕ ಮಾಡುವ ಭಾವಪೂಜೆಯು ಭಗವಂತನಿಗೆ ಹೆಚ್ಚು ಪ್ರಿಯ ಎಂಬ ಭಾವನೆಯನ್ನು ವ್ಯಕ್ತಪಡಿಸಿರುವ ಶ್ರೀಮತಿ ಶಶಿಕಲಾ ಅವರು ಬೆಂಗಳೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

ಸನಾತನ ಆರ್ಯ ಮಹರ್ಷಿಗಳು ನಿತ್ಯಕರ್ಮಾನುಷ್ಠಾನವನ್ನೂ ದೇವತಾರ್ಚನೆ ವಿಧಿಗಳನ್ನೂ "ಜೀವ"ನನ್ನು "ದೇವ" ನೆಡೆಗೆ ಸೇರಿಸುವ ಸೇತುವೆಯನ್ನಾಗಿ ನಿರ್ಮಿಸಿದರು. ಈ ಎಲ್ಲ ಪೂಜಾ ವಿಧಾನಗಳ ಹಿಂದೆ ಮಹರ್ಷಿಗಳ, ಜ್ಞಾನಿಗಳ ಅನುಭವವಿದೆ. ಬ್ರಹ್ಮಜ್ಞಾನಿಗಳು ಅಂತರ್ಯದಲ್ಲಿ ಕಂಡುಕೊಂಡ ಅನುಭವಗಳಿಗೆ ಬಾಹ್ಯದಲ್ಲೂ ಕೆಲವು ಚಿಹ್ನೆಗಳನ್ನು ಅಳವಡಿಸಿ ಅದಕ್ಕೆ ಅನುಗುಣವಾದ ಬಾಹ್ಯ ಪೂಜಾ ವಿಧಾನಗಳನ್ನು ಕಲ್ಪಿಸಿ ತನ್ಮೂಲಕ ಅಂತರ್ಯದ ಅನುಭವವನ್ನು ಗಳಿಸಲು ನೆರವು ಮಾಡಿಕೊಟ್ಟಿದ್ದಾರೆ.

ಪೂಜೆಯಲ್ಲಿ ಅತ್ಯಂತ ಪ್ರಮುಖವಾದ ಅಂಶ ಭಕ್ತಿ. ಬಾಹ್ಯ ಪೂಜೆಯ ಮೂಲಕ ಮಾನಸಪೂಜೆಗೆ ತಲುಪಿ ಅಲ್ಲಿಂದ ಮುಂದೆ ಭಗವತ್ಪ್ರಾಪ್ತಿ. ಆ ದಿವ್ಯ ನೆಲೆಗೆ ಸೇರಲು ಈ ಸರಳ ಮಾರ್ಗದಿಂದ ಶ್ರದ್ಧಾ ಭಕ್ತಿಗಳಿಂದ ಮುಂದುವರೆಯಲು ಪ್ರತಿಯೊಬ್ಬ ಆರಾಧಕನಿಗೂ ಅವಕಾಶ ಕಲ್ಪಿಸಿಕೊಟ್ಟಿದ್ದಾನೆ ಪರಂಜ್ಯೋತಿಯಾದ ಪರಮಾತ್ಮ.

ದುರದೃಷ್ಟವಶಾತ್ ದಿನಗಳುರುಳಿದಂತೆ ತನ್ನ ಮೂಲ ಉದ್ದೇಶದ ಮೌಲ್ಯವನ್ನೇ ಕಳೆದುಕೊಂಡ ಈ ಪೂಜೆಗಳಲ್ಲಿ ಬರಿಯ ಬಾಹ್ಯಾಚಾರ ಪದ್ಧತಿಗಳಿಗೇ ಪ್ರಾಮುಖ್ಯ ಕೊಡುತ್ತಾ ಅನೇಕ ಸಂಪ್ರದಾಯಗಳು ಹುಟ್ಟಿಕೊಂಡವು. ಶೈವರಿಗೊಂದು ಸಂಪ್ರದಾಯ, ವೈಷ್ಣವರಿಗೊಂದು ಸಂಪ್ರದಾಯ, ಈ ಶೈವ ವೈಷ್ಣವರಲ್ಲಿ ಅನೇಕ ಉಪಪಂಗಡಗಳು, ಅವುಗಳಲ್ಲಿ ವೈವಿಧ್ಯಮಯ ಹಾಗೂ ವೈಪರೀತ್ಯಗಳಿಂದ ತುಂಬಿದ ಸಂಪ್ರದಾಯಗಳು, ಕಠಿಣ ಪದ್ಧತಿಗಳು ಇವುಗಳಿಂದಾಗಿ ಸಾಮಾನ್ಯ ಮಾನವ ತಾನು ಯಾವ ಸಂಪ್ರದಾಯವನ್ನು ಹಿಡಿದು ಪೂಜಿಸಬೇಕೆಂಬ ಭ್ರಮೆಯಲ್ಲಿ ಸಿಲುಕಿಕೊಂಡ. ಅಷ್ಟೇ ಅಲ್ಲ ಇವು ಅವನಿಗೆ ಅನೇಕ ಅವೈಜ್ಞಾನಿಕ ಅನವಶ್ಯಕ ಭೀತಿಗಳಿಗೆ ಎಡೆಕೊಟ್ಟಿತು.

ಯಾವುದೇ ಸಂಪ್ರದಾಯವಾದರೂ ವಿಧಿವಿಧಾನಗಳನ್ನು ವಿಚಾರಪೂರ್ವಕವಾಗಿ ತೆಗೆದುಕೊಂಡು ಆಚರಿಸಿದಾಗ ಎಲ್ಲದರ ಗುರಿಯಾದ ಭಗವತ್ಪ್ರಾಪ್ತಿ ಸಾಧ್ಯವಾಗುವುದು. ಆದ್ದರಿಂದ ಭಗವತ್ಪ್ರಾಪ್ತಿಗೆ ಹುಟ್ಟಿದ ಈ ವಿಧಿ ವಿಧಾನಗಳು ಸಾಧನೆಗೆ ಪೋಷಕವಾಗಿರಬೇಕೇ ಹೊರತು ಬಾಹ್ಯ ಆಚರಣೆಗಳಿಗೇ ಹೆಚ್ಚಿನ ಪ್ರಾಧಾನ್ಯ ಕೊಡುತ್ತಾ ಪೂಜೆಯ ಫಲವಾದ ಪರಮಾತ್ಮನನ್ನು ಮರೆತುಬಿಟ್ಟರೆ ಅದು ಆರಾಧನೆಯಾಗದು. ಹಾಗೆಂದು ಪೂರ್ವಕಾಲದಿಂದಲೂ ಬಂದ ವಿಧಿ ವಿಧಾನಗಳು ವ್ಯರ್ಥ, ನಿರರ್ಥಕ ಎಂಬ ನಿರ್ಧಾರಕ್ಕೆ ಬರಲಾಗದು. ಕಾರಣ ಈ ವಿಧಿ ನಿಯಮಗಳಲ್ಲಿ ಅಲ್ಲಲ್ಲಿ ಮೂಲ ತತ್ತ್ವಕ್ಕೊಯ್ಯುವ ಅದ್ಭುತವಾದ ಅಂಶಗಳಿವೆ. ಬಾಹ್ಯದಲ್ಲೂ ಒಂದು ರೀತಿ, ನೀತಿ, ನಿಯಮಗಳನ್ನಿಟ್ಟುಕೊಂಡು ಅವುಗಳ ಸಹಾಯದಿಂದ ಮನಸ್ಸಿನ ಪರಿಶುದ್ಧತೆಯನ್ನೂ ಪೂಜೆಯಲ್ಲಿ ಏಕಾಗ್ರತೆಯನ್ನೂ ಕಾಪಾಡಿಕೊಳ್ಳಬಹುದು. ಆದ್ದರಿಂದ ಮಾಡುವ ಪೂಜೆ ಸಾತ್ವಿಕ ಪೂಜೆಯಾಗಬೇಕು. ಮನಸ್ಸಿನಲ್ಲಿ ಬರುವ ಆಲೋಚನೆ, ವಾಕ್‌ನಿಂದ ಬರುವ ಸೂಚನೆ ಮತ್ತು ಕ್ರಿಯಾರೂಪವಾದ ಆಚರಣೆ ಇವು ಮೂರೂ ಒಂದಾಗಿರಬೇಕು.

ಆದ್ದರಿಂದ ಯಾವುದೇ ವಿಧಾನದ ಪೂಜೆ ಮಾಡಿದರೂ ಬಹಿರಂಗ ಶುದ್ಧಿ, ಅಂತರಂಗ ಶುದ್ಧಿ ಇವೆರಡಕ್ಕೂ ಮಿಗಿಲಾಗಿ ಹೃದಯದಲ್ಲಿ ಭಕ್ತಿ ಅತಿ ಮುಖ್ಯ. ಸ್ನಾನ ಶೌಚಾದಿಗಳಿಂದ ಬಹಿರಂಗ ಶುದ್ಧಿಯಾಗುವುದು. ಪಾತ್ರೆಯೊಂದನ್ನು ಹೊರಗೆ ಹೊಳೆಯುವಂತೆ ಬೆಳಗಿದರೂ ಅದರ ಒಳಗೆ ಶುಭ್ರವಾಗಿ ತೊಳೆದಿರಬೇಕಾದುದು ಎಷ್ಟು ಮುಖ್ಯವೋ ಅಂತರಂಗ ಶುದ್ಧಿ ಅಷ್ಟೇ ಮುಖ್ಯವಾದುದು. ಮಡಿವಂತಿಕೆ ಅತಿಯಾಗಿ ಅದು ನಮ್ಮನ್ನು ಭಗವಂತನಿಂದ ದೂರ ಮಾಡಬಾರದು. ಬಾಹ್ಯ ಪೂಜೆ ಆಂತರಿಕ ಪೂಜೆಗೆ ಅನುಗುಣವಾಗಿರಬೇಕು, ಪ್ರತೀಕವಾಗಿರಬೇಕು, ಪೂರಕವಾಗಿರಬೇಕು. ಭಗವಂತನ ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯವನ್ನು ಕರುಣಿಸುವ ಶಕ್ತಿ ಭಕ್ತಿಭರಿತ ಪೂಜೆಯಲ್ಲಿದೆ.

ಬಾಹ್ಯಾಡಂಬರವಿಲ್ಲದ ಅಂತರಂಗ ಶುದ್ಧಿಯಿಂದ ಕೂಡಿದ ಮಾನಸಪೂಜೆ ಅತ್ಯಂತ ಶ್ರೇಷ್ಠವಾದುದು, ಭಗವಂತನಿಗೆ ಅತ್ಯಂತ ಪ್ರಿಯವಾದುದು. ಪರಮಾತ್ಮನೇ ಗೀತೆಯಲ್ಲಿ,

ಪತ್ರಂ ಪುಷ್ಪಂ ಫಲಂ ತೋಯಂ
ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥

"ಯಾವನು ನನಗೆ ಎಲೆಯನ್ನಾಗಲೀ ಹೂವನ್ನಾಗಲೀ ಹಣ್ಣನ್ನಾಗಲೀ ನೀರನ್ನಾಗಲೀ ಭಕ್ತಿಯಿಂದ ಕೊಡುವನೋ ಅಂತಹ ಶುದ್ಧ ಚಿತ್ತವುಳ್ಳವನು ಭಕ್ತಿಯಿಂದ ಸಮರ್ಪಿಸಿದ ಅವನ್ನು ನಾನು ಸ್ವೀಕರಿಸುತ್ತೇನೆ," ಎಂದು ಹೇಳಿದ್ದಾನೆ.

ಆದ್ದರಿಂದ ಅಂತರಂಗ ಶುದ್ಧಿ ಬಹುಮುಖ್ಯ. ಇದನ್ನೇ ದಾಸವರ ಪುರಂದರರು "ಮನಶ್ಶುದ್ಧಿ ಇಲ್ಲದವಗೆ ಮಂತ್ರದ

ಫಲವೇನು, ತನುಶುದ್ಧಿ ಇಲ್ಲದವಗೆ ತೀರ್ಥದ ಫಲವೇನು.... ಹೊರಗೆ ಮಿಂದು ಒಳಗೆ ಮೀಯದವರ ಕಂಡು ಬೆರಗಾಗಿ ನಗುತ್ತಿದ್ದ ಪುರಂದರ ವಿಠಲ" ಎಂದು ಹಾಡಿದ್ದಾರೆ. ಹಾಗೆಂದು ಬಾಹ್ಯ ಪೂಜೆಯಿಂದ ಪ್ರಯೋಜನವಿಲ್ಲ, ಮಾನಸಿಕ ಪೂಜೆಯೇ ಶ್ರೇಷ್ಠ ಎಂಬ ತೀರ್ಮಾನಕ್ಕೆ ಬರಲಾಗದು. ಮಾನಸಪೂಜೆಯ ಘಟ್ಟ ತಲುಪಲು ಬಾಹ್ಯಪೂಜೆ ಪ್ರಥಮ ಸೋಪಾನ. ಇದನ್ನು ಪೂರ್ವದಿಂದಲೂ ಬಂದ ಅರ್ಥಭಾವಗಳಿಂದ ಸ್ವೀಕರಿಸಿ ಯಥಾವತ್ತಾಗಿ ಆಚರಿಸಬೇಕು.

ಈ ಬಾಹ್ಯಪೂಜೆಯ ದೇವತಾರ್ಚನ ವಿಧಿಯಲ್ಲಿ ಮುಖ್ಯವಾದುವು: ೧. ದೀಪಜ್ಯೋತಿ ೨. ಪವಿತ್ರ ಧಾರಣೆ ೩. ಘಂಟಾವಾದನ ೪. ಆಚಮನ ೫.ಆವಾಹನ ೬. ಆಸನ ೭. ಪಾದ್ಯ ೮. ಅರ್ಘ್ಯ ೯. ಸ್ನಾನ ೧೦. ವಸ್ತ್ರ ೧೧. ಉಪವೀತ ೧೨. ಗಂಧ ೧೩. ಪುಷ್ಪ ೧೪. ನೈವೇದ್ಯ ೧೫. ನೀರಾಜನ ೧೬. ಪ್ರದಕ್ಷಿಣೆ ನಮಸ್ಕಾರ ೧೭. ಭಗವದರ್ಪಣ ೧೮. ಸ್ವಸ್ತಿವಾಚನ.

ಈ ಷೋಡಶೋಪಚಾರಾದಿ ಪೂಜೆಗಳಿಂದ ಭಗವಂತನಿಗೆ ಆಗಬೇಕಾದುದು ಏನೂ ಇಲ್ಲ. ಕಂದನಿಗೆ ತಿಂಡಿಯನ್ನು ತಾನೇ ಕೊಟ್ಟು, ಮತ್ತೆ ತಾನೇ ಕೇಳಿ ಪಡೆಯುವ ತಂದೆಯಂತೆ ನಮ್ಮಿಂದ ಈ ಕಿಂಚಿತ್ ಸೇವೆಯನ್ನು ಸ್ವೀಕರಿಸಿ ಬೃಹತ್ ಫಲವನ್ನು ಕರುಣಿಸುತ್ತಾನೆ ಭಗವಂತ ಎಂಬುದು ಬಲ್ಲವರ ಅನುಭವ.

### ೧. ದೀಪಜ್ಯೋತಿ

ಸ್ವಯಂ ಪ್ರಕಾಶನೂ ಸೂರ್ಯಚಂದ್ರರನ್ನೇ ಕಣ್ಣುಗಳನ್ನಾಗಿ ಉಳ್ಳ ಆ ಪರಂಜ್ಯೋತಿಗೆ ನಾವು ಹಚ್ಚುವ ಎಣ್ಣೆಯ ದೀಪದ ಬೆಳಕು ಬೇಕೆ? **ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ | ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ ||** "ಅಲ್ಲಿ ಸೂರ್ಯನಾಗಲಿ, ಚಂದ್ರನಾಗಲಿ, ನಕ್ಷತ್ರಗಳಾಗಲಿ ಪ್ರಕಾಶಿಸುವುದಿಲ್ಲ. ಈ ನಕ್ಷತ್ರಗಳೂ ಪ್ರಕಾಶಿಸುವುದಿಲ್ಲ. ಇನ್ನು ಅಗ್ನಿಯು ಪ್ರಕಾಶಿಸುವುದೆಲ್ಲಿ? ಪ್ರಕಾಶಿಸುತ್ತಿರುವ ಅವನನ್ನು ಅನುಸರಿಸಿ ಎಲ್ಲವೂ ಪ್ರಕಾಶಿಸುತ್ತಿವೆ. ಅವನ ಪ್ರಕಾಶದಿಂದಲೇ ಇವೆಲ್ಲವೂ ಪ್ರಕಾಶಿಸುತ್ತಿವೆ."

ಆದ್ದರಿಂದ ನಮ್ಮಲ್ಲಿರುವ ಅಂತರ್ಜ್ಯೋತಿಯನ್ನು, ಜ್ಞಾನಜ್ಯೋತಿಯನ್ನು ಭಗವಂತ ಬೆಳಗಿಸಲಿ ಎಂಬ ಸಾಂಕೇತಿಕ ಪ್ರಾರ್ಥನೆಯೊಂದಿಗೆ ಹೊರಗೂ ದೀಪವನ್ನು ಬೆಳಗಿಸಬೇಕು. **ತಮಸೋ ಮಾ ಜ್ಯೋತಿರ್ಗಮಯ**—ಅಜ್ಞಾನವೆಂಬ ಅಂಧಕಾರದಿಂದ ಪಾರುಮಾಡಿ ಜ್ಞಾನವೆಂಬ ಬೆಳಕಿನೆಡೆಗೆ ನಮ್ಮನ್ನು ಕರೆದೊಯ್ಯಲು ಪ್ರಾರ್ಥಿಸಬೇಕು.

### ೨. ಪವಿತ್ರ ಧಾರಣೆ

ಪುರಾಣದಲ್ಲಿ ಮಾತೃಭಕ್ತನಾದ ಗರುಡನು ತನ್ನ ತಾಯಿಯನ್ನು ದಾಸ್ಯದಿಂದ ವಿಮೋಚನೆ ಮಾಡಲು ದೇವಲೋಕದಿಂದ ಅಮೃತ ಕಲಶವನ್ನು ತಂದು ಅದನ್ನು ದರ್ಭೆಯ ಮೇಲಿಟ್ಟಾಗ ಅಮೃತ ಸಂಪರ್ಕ ಹೊಂದಿದ ದರ್ಭೆ "ಪವಿತ್ರ"ಎಂಬ ಹೆಸರನ್ನು ಪಡೆಯಿತೆಂದು ಪ್ರತೀತಿ. ಈ ದರ್ಭೆಯ ಮೂಲದಲ್ಲಿ ಬ್ರಹ್ಮ, ಮಧ್ಯೆ ವಿಷ್ಣು ಮತ್ತು ಅಗ್ರದಲ್ಲಿ ಈಶ್ವರನು ವಾಸಿಸುವುದರಿಂದ ಇದು ಆರಾಧಕನ ಆಧ್ಯಾತ್ಮಿಕ ಶಕ್ತಿಯನ್ನು ರಕ್ಷಿಸುತ್ತದೆ ಮತ್ತು ಹೆಚ್ಚಿಸುತ್ತದೆ ಎಂಬುದು ಅರಿತವರ ಅನುಭವ. ಆದ್ದರಿಂದ ಪವಿತ್ರತೆಯ ಸ್ವರೂಪವೇ ಆಗಿರುವ ಪರಮಾತ್ಮನ ಸಂಸ್ಮರಣೆಯೊಂದಿಗೆ ಸಾಧಕ "ಪವಿತ್ರ"ವನ್ನು ಧರಿಸಬೇಕು. ತನ್ನ ಮಾತೂ ಮನಸ್ಸೂ ಸದಾ ಪವಿತ್ರವಾಗಿರಲು "ಪವಿತ್ರ"ಪಾಣಿಯಾಗಿ ಕರ್ಮ ಮಾಡಬೇಕು.

### ೩. ಘಂಟಾವಾದನ

ಘಂಟಾನಾದ ಓಂಕಾರದ ಪ್ರತೀಕ. ಪ್ರಣವ ಸ್ವರೂಪಿಯೇ ಆದ ಪರಮಾತ್ಮನಿಗೆ ನಮ್ಮ ಘಂಟಾವಾದನವೇಕೆ? ಪ್ರಣವ ಎಲ್ಲ ಮಂತ್ರಗಳ ಮೂಲ. ಪರಮಾತ್ಮನ ಸೃಷ್ಟಿ ಸ್ಥಿತಿ ಲಯ ಕಾರ್ಯಗಳ ಪ್ರತೀಕ. ಯೋಗಿಗಳು ಧ್ಯಾನದಲ್ಲಿ ತಾನೇ ತಾನಾಗಿ ಹೊರಹೊಮ್ಮುವ ಒಂದು "ಅನಾಹತ" ನಾದದ ಅನುಭವವನ್ನು ಪಡೆಯುತ್ತಾರೆ. ಈ ಅನಾಹತ ನಾದವೇ ಪ್ರಣವ. ಈ ಅಂತರ್ನಾದಕ್ಕೆ ಅನುಗುಣವಾದ ಓಂಕಾರವಾಚಕ ಘಂಟಾನಾದ ಮಂಗಳಕರ ನಾದ. ಈ ಸ್ಮರಣೆಯೊಂದಿಗೆ ಮಾಡುವ ಘಂಟಾವಾದನ ಆತ್ಮಲಾಭಕ್ಕೆ ಸಾಧನ.

### ೪. ಆಚಮನ

ನಿತ್ಯಶುದ್ಧನೂ ಪುಣ್ಯಸ್ವರೂಪಿಯೂ ಆದ ಪರಮಾತ್ಮನಿಗೆ ಆಚಮನವೆಲ್ಲಿಯದು? ಆಚಮನ ಬೇಕಾಗಿರುವುದು ಆರಾಧಕನಿಗೆ. ಸ್ನಾನದಿಂದ ದೇಹದ ಬಹಿಶ್ಶುದ್ಧಿಯಾಗುವಂತೆ ಕೇಶವಾದಿ ೨೪ ನಾಮಗಳ ಸ್ಮರಣೆಯೊಂದಿಗೆ ಮಾಡುವ ಆಚಮನದಿಂದ ಅಂತಃಶುದ್ಧಿ ಮಾಡಿಕೊಳ್ಳುವುದು ಪದ್ಧತಿ. ಪೂಜೆಗೆ ಕುಳಿತವನು ದೇಹ ಮನಸ್ಸು ಬುದ್ಧಿ ಎಲ್ಲವನ್ನೂ ಶುದ್ಧವಾಗಿಟ್ಟುಕೊಂಡಿರಬೇಕೆಂಬುದೇ ಆಚಮನದ ಹಿಂದಿರುವ ಆಶಯ.

### ೫. ಆವಾಹನ

ಪರಿಪೂರ್ಣರೂಪದಿಂದ ಎಲ್ಲೆಲ್ಲಿಯೂ ಇರುವವನನ್ನು ಎಲ್ಲಿಗೆ ಆಹ್ವಾನಿಸಿ ಸ್ವಾಗತವನ್ನು ಕೋರುವುದು? ಆರಾಧಕನು ದೇವರನ್ನು ತನ್ನ ಹೃದಯದಿಂದ ಹೊರಬಂದು ದೇವತಾಮೂರ್ತಿಯಲ್ಲಿ ಐಕ್ಯವಾಗಿ ಪೂಜೆಯನ್ನು ಸ್ವೀಕರಿಸೆಂದು ಪ್ರಾರ್ಥಿಸುವುದೇ ಆವಾಹನೆ. ನಿರಾಕಾರನೂ ನಿತ್ಯನೂ ನಿರ್ಗುಣನೂ ಸರ್ವವ್ಯಾಪಿಯೂ ಆದ ಪರಮಾತ್ಮನನ್ನು ಆರಾಧಕನು ತನ್ನ ಇಷ್ಟ ದೇವತಾ ಮೂರ್ತಿಯಲ್ಲಿ ಕಾಣುತ್ತಾ **ಆವಾಹಿತೋ ಭವ, ಸ್ಥಾಪಿತೋ ಭವ, ಸುಪ್ರಸನ್ನೋ ಭವ** ಎಂಬ ಆವಾಹನ ಮಂತ್ರಗಳನ್ನು ಪಠಿಸುತ್ತಾನೆ.

### ೬. ಆಸನ

ಸಮಸ್ತ ಚರಾಚರ ಜಗತ್ತಿಗೂ ಆಧಾರಭೂತನಾಗಿರುವವನಿಗೆ

ಬೇರೆಯಾದ ಆಸನವನ್ನು ಕೊಡುವುದೆಂತು? ಎಲ್ಲರಿಗೂ ಒಡೆಯನಾಗಿ ಅತ್ಯಂತ ಎತ್ತರದಲ್ಲಿರುವ ಪರಮಾತ್ಮನಿಗೆ ಆರಾಧಕನು ಪೂಜಾಕಾಲದಲ್ಲಿ ಉತ್ತಮವಾದ ಎತ್ತರವಾದ ಆಸನವನ್ನು ಅರ್ಪಿಸುವನು. ಹೊರಗಿನ ಎಲ್ಲ ಆಸನಗಳಿಗಿಂತಲೂ ಅತ್ಯುತ್ತಮವಾದ ಆಸನ ನಮ್ಮ ಹೃದಯಪೀಠ, ಪರಮಾತ್ಮ ಅಲ್ಲಿ ವಿರಾಜಮಾನನಾಗಲಿ ಎಂಬುದರ ಸಂಕೇತ ನಾವು ಹೊರಗೆ ಅರ್ಪಿಸುವ ಆಸನ.

## ೭. ಪಾದ್ಯ

ಸಹಜವಾಗಿಯೆ ಸ್ವಚ್ಛನಾಗಿರುವ ಪರಿಶುದ್ಧತೆಯ ಮೂರ್ತಿಯೇ ತಾನಾದ ಪರಮಾತ್ಮನಿಗೆ ಪಾದ ತೊಳೆಯಲು ನೀರನ್ನು ಕೊಡಬೇಕೆ? ಇಲ್ಲಿ ಪಾದ ತೊಳೆಯುವುದು ಎಂದರೆ ಪರಮಾತ್ಮನ ಪಾದ ಧೂಳಿಯನ್ನು ಸ್ವೀಕರಿಸಿ ಶಿರದಲ್ಲಿ ಧರಿಸುವುದು ಎಂದರ್ಥ. ಯಾವ ಪಾವನ ಪಾದಗಳಿಂದ ಪವಿತ್ರಗಂಗೆ ಜನಿಸಿದಳೋ, ಯಾವ ಪಾದಧೂಳಿಯಿಂದ ಶಿಲೆಯಾಗಿದ್ದ ಅಹಲ್ಯೆ ಪಾವನಳಾದಳೋ ಅಂತಹ ಶುಭ ಚಿಹ್ನೆಗಳಿಂದ ಕೂಡಿದ ಪಾದಪದ್ಮಗಳಿಂದ ಸರ್ವ ಪಾಪಹರವಾದ ಶುದ್ಧೋದಕ ಹರಿದು ಬರುವುದು.

## ೮. ಅರ್ಘ್ಯ

ಸಕಲ ಸಾಮುದ್ರಿಕ ಲಕ್ಷಣಗಳಿಂದ ಕೂಡಿದ ಪರಮಾತ್ಮನ ಹಸ್ತವು ಆರಾಧಕನಿಗೆ ಅಭಯ ಪ್ರದಾಯಕ, ಇಂತಹ ಶುದ್ಧ ಹಸ್ತಗಳಿಗೆ ಶುದ್ಧೋದಕ ಬೇಕೆ? ಆದರೂ ಗಂಗಾದಿ ಪುಣ್ಯನದಿಗಳ ತೀರ್ಥವನ್ನು ಗಂಧಪುಷ್ಪಾದಿಗಳೊಡನೆ ಮಿಶ್ರಮಾಡಿ ಪರಮಾತ್ಮನ ಕೈಗಳನ್ನು ತೊಳೆಯುವುದರಿಂದ ಸಾಧಕನು ಸಕಲ ಪಾಪಗಳಿಂದ ಮುಕ್ತನಾಗುವಂತೆ ಅಭಯವನ್ನು ಕರುಣಿಸುತ್ತಾನೆ. ಸಾಧಕ ಪರಮಾತ್ಮನ ಹಸ್ತಗಳಲ್ಲಿ ತನ್ನನ್ನು ಒಪ್ಪಿಸಿಕೊಂಡು **ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್** ಎಂದು ಪ್ರಾರ್ಥಿಸಬೇಕು.

## ೯. ಸ್ನಾನ

ನಿತ್ಯನಿರ್ಮಲನಾದವನಿಗೆ ಸ್ನಾನದ ಗೊಡವೆಯೇಕೆ? **ಆಪೋಹಿಷ್ಠಾ ಮಯೋ ಭುವಃ** ಇವೇ ಮೊದಲಾದ ಒಂಭತ್ತು ಮಂತ್ರಗಳ ಉಚ್ಚಾರಣೆಯಿಂದ ಮನುಷ್ಯನ ಎಲ್ಲ ದೋಷಗಳು ಪರಿಹಾರವಾಗಿ ತ್ರಿಕರಣಶುದ್ಧಿಯುಂಟಾಗುತ್ತದೆ. ಶ್ರದ್ಧೆ ಎಂಬ ನದಿಯ ನಿರ್ಮಲ ಮನವೆಂಬ ಜಲದಿಂದ ದೇವರಿಗೆ ಸ್ನಾನವನ್ನು ಮಾಡಿಸಬೇಕು.

## ೧೦. ವಸ್ತ್ರ

ಪ್ರಪಂಚವನ್ನೆ ತನ್ನ ಉದರದಲ್ಲಿ ಇಟ್ಟುಕೊಂಡಿರುವವನಿಗೆ ಬೇರೆ ವಸ್ತ್ರಗಳೇಕೆ? ಚರಾಚರ ಜಗತ್ತಿನಲ್ಲಿ ಸರ್ವವ್ಯಾಪಿಯಾಗಿ ಓತಪ್ರೋತನಾಗಿರುವ ಪರಮಾತ್ಮನಿಗೆ ನಾವು ವಸ್ತ್ರವನ್ನು ಹೊದಿಸುವುದು ಸಾಧ್ಯವೇ? ಆದರೂ ಕಣ್ಮನಗಳಾಚೆ ಇರುವವನನ್ನು ಕಣ್ಮನಗಳಿಗೆ ಎಟುಕಿರುವನೆಂದು ಭಾವಿಸಿ ವಿಧವಿಧವಾಗಿ ತನ್ನ ಭಕ್ತಿಯ ಸಮರ್ಪಣೆಗೈದು ಸಂತೃಪ್ತನಾಗುವನು ಆರಾಧಕ. ತನ್ನ ಕಂದಮ್ಮಗಳನ್ನು ಸುಂದರ ವೈವಿಧ್ಯ ವರ್ಣಮಯ ವಸ್ತ್ರಗಳಿಂದ ಅಲಂಕರಿಸಿ ಅದನ್ನು ಕಂಡು ಆನಂದಪಟ್ಟುಕೊಳ್ಳುವ ತಾಯಿಯಂತೆ ಭಕ್ತನು ಭಗವಂತನಿಗೆ ನಾನಾ ವಸ್ತ್ರಾಲಂಕಾರಗಳನ್ನು ಮಾಡಿ ಆನಂದಪಡುತ್ತಾನೆ.

## ೧೧. ಉಪವೀತ

ಅತ್ರಿ ವಸಿಷ್ಠ ಭರದ್ವಾಜಾದಿ ಗೋತ್ರವರ್ಜಿತನೂ, ಬ್ರಹ್ಮಕ್ಷತ್ರಾದಿ ವರ್ಣರಹಿತನೂ ಆದ ದೇವನಿಗೆ ಯಜ್ಞೋಪವೀತವನ್ನು ಹಾಕುವುದು ಹೇಗೆ? ಹಾಕಬೇಕಾದರೂ ಏಕೆ? ಯಜ್ಞೋಪವೀತವನ್ನು ಯಜ್ಞಪುರುಷನಿಗೆ ಸಮರ್ಪಿಸುವುದರಿಂದ ನಮಗೆ ಬಲವೂ ತೇಜಸ್ಸೂ ವರ್ಧಿಸುವುದು. ಮನಸ್ಸು ಉತ್ತಮ ಭಾವದಿಂದ, ಉದಾತ್ತ ವಿಚಾರಗಳಿಂದ, ಪವಿತ್ರಚಿಂತನೆಗಳಿಂದ ತುಂಬಿಕೊಳ್ಳುವುದು.

## ೧೨. ಗಂಧ

ಯಾವುದರ ಲೇಪನವೂ ಇಲ್ಲದವನಿಗೆ ಗಂಧವನ್ನು ಲೇಪಿಸುವುದರಲ್ಲಿ ಅರ್ಥವುಂಟೆ? ಭಕ್ತನಾದವನು ತನ್ನಲ್ಲಿರುವ ಅತ್ಯುತ್ತಮವಾದುದನ್ನು ಪರಮಾತ್ಮನಿಗೆ ಸಮರ್ಪಿಸಬೇಕೆಂಬುದೇ ಈ ವಿಧಿವಿಧಾನದ ಆಂತರಿಕ ಅರ್ಥ. ಶುದ್ಧ ಬುದ್ಧಿ ಮನಸ್ಸುಗಳಿಂದ ತುಂಬಿದ ತನ್ನ ಹೃದಯವನ್ನು ಪರಮಾತ್ಮನಿಗೆ ಅರ್ಪಿಸಿಕೊಂಡರೆ ಅದೇ ದಿವ್ಯ ಪರಿಮಳಯುಕ್ತ ಶ್ರೀಗಂಧ.

## ೧೩. ಪುಷ್ಪ

ವಾಸನಾರಹಿತನಾಗಿರುವವನಿಗೆ ಸುಗಂಧ ಪುಷ್ಪಗಳೇಕೆ? ಅವನು ಬಯಸುವುದು ಬರಿಯ ಹೊರಗಿನ ಪುಷ್ಪಗಳನ್ನಲ್ಲ. ಭಕ್ತಿ ಪರಿಮಳಯುಕ್ತ ಭಕ್ತನ ಹೃದಯ ಪುಷ್ಪಗಳನ್ನು. ಹೇಗೆ ಪರಿಮಳ ಭರಿತ, ವರ್ಣರಂಜಿತ ಸುಂದರ ಪುಷ್ಪಗಳು ನಮ್ಮ ಕಣ್ಮನಗಳಿಗೆ ಆಹ್ಲಾದವನ್ನುಂಟುಮಾಡುವವೋ ಅಂತೆಯೇ ಭಕ್ತಿ ಪ್ರಪತ್ತಿಗಳಿಂದ ತುಂಬಿದ ಭಕ್ತನ ಹೃದಯ ಪುಷ್ಪಗಳು ಪರಮಾತ್ಮನಿಗೆ ಆನಂದವನ್ನುಂಟುಮಾಡುವವು.

## ೧೪. ನೈವೇದ್ಯ

ಸ್ವಾತ್ಮಾನಂದ ಮಾತ್ರದಿಂದಲೇ ತೃಪ್ತನಾಗಿರುವವನಿಗೆ ನೈವೇದ್ಯವೇಕೆ? ಸದಾ ತೃಪ್ತನಾದ ಆ ದೇವದೇವನಿಗೆ ನಮ್ಮ ನೈವೇದ್ಯದಿಂದ ಆಗಬೇಕಾದುದೇನಿದೆ? ನೈವೇದ್ಯ ಎಂದರೆ "ಸಮರ್ಪಣೆ"—ನಿಸ್ವಾರ್ಥ ಭಾವದಿಂದ ಕೊಡುವುದು ಎಂದರ್ಥ. ಇದರಿಂದ ನಮ್ಮಲ್ಲಿ ಧನ್ಯತಾಭಾವ ಉಂಟಾಗುವುದು. ಹೊಸ ಚೈತನ್ಯ ಮೂಡುವುದು. ನಿಜವಾದ ನೈವೇದ್ಯ ಯಾವುದು? ನಾವು ಮಾಡುವ ಎಲ್ಲ ಸತ್ಕಾರ್ಯಗಳ ಫಲವನ್ನು ದೇವರಿಗೆ ನೈವೇದ್ಯ ಮಾಡಿ ಕೃತಕೃತ್ಯರಾಗಬೇಕು. ಭಕ್ತಿಯಿಂದ ನಾವು ಅರ್ಪಿಸುವ ನೈವೇದ್ಯವನ್ನು ಭಗವಂತ ಖಂಡಿತವಾಗಿಯೂ ಸ್ವೀಕರಿಸುತ್ತಾನೆ. ಇದನ್ನು ಭಗವಾನ್ ರಾಮಕೃಷ್ಣರು ಪ್ರತ್ಯಕ್ಷವಾಗಿ ದರ್ಶಿಸಿರುವರು.

ಕಾಳೀದೇವಾಲಯದಲ್ಲಿ ಭವತಾರಿಣಿದೇವಿಗೆ ನೈವೇದ್ಯ ಸಮರ್ಪಣೆ ಮಾಡುವಾಗ ಜ್ಯೋತಿಯೊಂದು ನೈವೇದ್ಯ ಪದಾರ್ಥ ದಿಂದ ಹೊರಟು ಭಗವತಿಯಲ್ಲಿ ಐಕ್ಯವಾಗುವುದನ್ನು ಪ್ರತ್ಯಕ್ಷ ದರ್ಶಿಸಿರುವುದಾಗಿ ಭಕ್ತವೃಂದಕ್ಕೆ ಹೇಳಿದ್ದಾರೆ. ಇಂತಹ ನೈವೇದ್ಯ ಪದಾರ್ಥವನ್ನು "ಪ್ರಸಾದ"ವೆಂಬ ಭಾವನೆಯಿಂದ ಸೇವಿಸಿದರೆ ಮನಸ್ಸಿಗೆ ತೃಪ್ತಿ ಉಂಟಾಗಿ ಉಪಾಸನೆಗೆ ವಿಶೇಷ ಸ್ಫೂರ್ತಿ ಯನ್ನುಂಟುಮಾಡುತ್ತದೆ.

೧೫. ನೀರಾಜನ

ಎಲ್ಲಕ್ಕೂ ಸಾಕ್ಷೀಭೂತನಾಗಿರುವವನಿಗೆ ದೀಪವನ್ನು ಬೆಳ ಗುವುದು, ಸೂರ್ಯಚಂದ್ರಾದಿಗಳನ್ನು ಹೊಳೆಯುವಂತೆ ಮಾಡುವ ಸ್ವಯಂಜ್ಯೋತಿಪ್ರಕಾಶನಿಗೆ ಮಂಗಳಾರತಿಯನ್ನು ಬೆಳ ಗುವುದು ಹೇಗೆ? ಆರಾಧಕನು ಆತ್ಮಜ್ಞಾನವೆಂಬ ದೀಪದಿಂದ ಆರತಿಯನ್ನು ಬೆಳಗಬೇಕು. ಅಜ್ಞಾನವೆಂಬ ಕತ್ತಲೆಯನ್ನು ನಾಶ ಗೊಳಿಸುವುದರಲ್ಲಿ ಸಮರ್ಥವೂ ಅತಿ ಪ್ರಕಾಶಮಾನವೂ ಆದ ನಮ್ಮ ಸ್ವರೂಪಜ್ಞಾನವೇ ನಾವು ಪರಮಾತ್ಮನಿಗೆ ಬೆಳಗುವ ಮಂಗಳಮಯ ಆರತಿ.

೧೬. ಪ್ರದಕ್ಷಿಣೆ — ನಮಸ್ಕಾರ

ಆದ್ಯಂತರಹಿತನಾಗಿ ಸರ್ವವ್ಯಾಪಿಯಾಗಿರುವ ಪರಮಾತ್ಮನಿಗೆ ಪ್ರದಕ್ಷಿಣೆ ಬರುವುದು ಹೇಗೆ? ತನಗಿಂತ ಬೇರೆಯಲ್ಲದ ಅಭೇದವಸ್ತುವಿಗೆ ನಮಸ್ಕರಿಸುವುದು ಹೇಗೆ? ಅಖಿಲಾಂಡಕೋಟಿ ಬ್ರಹ್ಮಾಂಡಗಳು ಈಶ್ವರರೂಪಿಯಾದ ಪರಮಾತ್ಮನಲ್ಲಿ ಸುತ್ತುತ್ತಿದ್ದರೂ ತಾನು ಕೂಟಸ್ಥನಾಗಿರುವ ಆ ದೇವದೇವನನ್ನು ಚಿಂತಿಸುವುದೇ ನಾವು ಅವನಿಗೆ ಮಾಡುವ ಪ್ರದಕ್ಷಿಣೆ. ದೇವಾಲಯಗಳಲ್ಲೂ ಪ್ರದಕ್ಷಿಣ ಪ್ರಾಕಾರಗಳಿರುತ್ತವೆ. ದೇವ ಮಂದಿರವನ್ನು ಪ್ರವೇಶಿಸುವ ಭಕ್ತನು ಗರ್ಭಗುಡಿಯಲ್ಲಿರುವ ಭಗ ವಂತನ ಪ್ರಭಾವಲಯದಲ್ಲಿ ಸೇರಿಕೊಂಡು, ಆ ಬೆಳಕಿನ ಪ್ರವಾಹಕ್ಕೆ ಅಭಿಮುಖವಾಗಿ ಪ್ರದಕ್ಷಿಣ ಪಥದಲ್ಲಿ ಸಾಗಿ ಬಂದು ನಮಸ್ಕರಿಸುತ್ತಾನೆ. ಪರಮಾತ್ಮ ಜಗದ್ವಂದ್ಯ, ಅವನನ್ನು ಬಿಟ್ಟು ವಂದನೀಯನು ಮತ್ತೊಬ್ಬನಿಲ್ಲ ಎಂದು ಭಾವಿಸುವುದೇ ನಾವು ಅವನಿಗೆ ಸಲ್ಲಿಸುವ ವಂದನೆ.

೧೭. ಭಗವದರ್ಪಣ

ಭಗವಂತನಿಗೆ ಬೇಕಾದುದು ಭಕ್ತನ ಭಕ್ತಿಭರಿತ ಹೃದಯ. ಆದ್ದರಿಂದ ಸಾಧಕನಾದವನು ಸಾಧನೆಗೆ ತನ್ನನ್ನು ಸಂಪೂರ್ಣವಾಗಿ ಒಪ್ಪಿಸಿಕೊಂಡು "ಸಾಧ್ಯ"ನಾದ ಆ ದೇವದೇವನಿಗೆ ತನ್ನನ್ನು ಸಮರ್ಪಿಸಿಕೊಳ್ಳಬೇಕು. ದೇಹ, ವಾಕ್ಕು, ಮನಸ್ಸು, ಇಂದ್ರಿಯ, ಬುದ್ಧಿ, ಆತ್ಮ ಅಥವಾ ಪ್ರಕೃತಿ ಸ್ವಭಾವಗಳ ಮೂಲಕ ಮಾಡುವ ಎಲ್ಲವನ್ನೂ ಅವನ ಅಡಿದಾವರೆಗಳಲ್ಲಿ ಅರ್ಪಿಸಬೇಕು.

೧೮. ಸ್ವಸ್ತಿ ವಾಚನ

ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ ಎಂದು ಸ್ವಾಮಿ ವಿವೇಕಾನಂದರು ಸಾರುತ್ತಾರೆ. ಈ ಎಲ್ಲ ಪೂಜಾ ಕಾರ್ಯಗಳಿಂದ ಸಾಧಕ ತನ್ನೊಬ್ಬನ ಉದ್ಧಾರ ಮಾತ್ರ ಆಶಿಸಬಾರದು. ಜಗತ್ತಿನ ಹಿತವನ್ನೂ ಬಯಸಬೇಕು. ಅದಕ್ಕಾಗಿಯೇ ಈ ಸ್ವಸ್ತಿವಾಚನವು ಪೂಜಾ ಸಂಪ್ರದಾಯಗಳಲ್ಲಿ ಅನಾದಿಕಾಲದಿಂದಲೂ ಸೇರಿಕೊಂಡು ಬಂದಿದೆ. ಸಮಸ್ತ ಜೀವಕೋಟಿಗಳ ಕಲ್ಯಾಣವನ್ನು ಬಯಸಿ ಎಲ್ಲರೂ ಕಷ್ಟಗಳಿಂದ ಪಾರಾಗಲಿ, ಎಲ್ಲರೂ ಶುಭವಾದುದನ್ನು ಕಾಣಲಿ ಎಲ್ಲರೂ ಎಲ್ಲೆಡೆಗಳಲ್ಲಿಯೂ ಆನಂದಿಸಲಿ ಎಂದು ಪ್ರಾರ್ಥಿಸಿ ಪೂಜಾಫಲವನ್ನು ಭಗವಂತನಿಗೆ ಅರ್ಪಣೆ ಮಾಡಬೇಕು.

ಹೀಗೆ ಆಂತರಿಕ ಪೂಜೆಗೆ ಅನುಗುಣವಾದ ಬಾಹ್ಯಪೂಜೆ ನಮ್ಮ ನಿತ್ಯಪೂಜೆಯಾಗಬೇಕು. ಇಲ್ಲದಿದ್ದಲ್ಲಿ ನಾವು ಮಾಡುವ ನಿತ್ಯಪೂಜೆ ನೀರಸವೂ, ಯಾಂತ್ರಿಕವೂ ಅಥವಾ ಇತರರೆದುರು ಮಾಡುವ ಬರಿಯ ಪ್ರದರ್ಶನವೂ ಆಗಿಬಿಡುತ್ತದೆ. ಇದರಿಂದ ಆತ್ಮಲಾಭ ವಾಗಲಿಲ್ಲ ಎಂಬುದು ಮಾತ್ರವಲ್ಲ, ಆತ್ಮವಂಚನೆ ಮಾಡಿ ಕೊಂಡಂತಾಗುವುದು. ಮುಖ್ಯವಾಗಿ ಬೇಕಾದುದು ಭಗವಂತನಲ್ಲಿ ಭಕ್ತಿ ಮತ್ತು ವ್ಯಾಕುಲತೆ. ಶ್ರೀರಾಮಕೃಷ್ಣರು ಹೇಳುವಂತೆ "ಯಾವಾಗ ನಿಮಗೆ ಹರಿನಾಮವನ್ನೋ ರಾಮನಾಮವನ್ನೋ ಒಮ್ಮೆ ಉಚ್ಚ ರಿಸಿದ ಮಾತ್ರದಿಂದಲೇ ರೋಮಾಂಚನವಾಗುವುದೋ, ಪ್ರೇಮಾಶ್ರು ಸುರಿಯುವುದೋ ಆಗ ನಿಜವಾಗಿ ತಿಳಿದುಕೊಳ್ಳಿ, ಇನ್ನು ನೀವು ಸಂಧ್ಯಾದಿ ಕರ್ಮಗಳನ್ನು ಮಾಡಬೇಕಾಗಿಲ್ಲ, ಎಂದು. ಆಗ ಮಾತ್ರವೇ ನಿಮಗೆ ಕರ್ಮತ್ಯಾಗದ ಅಧಿಕಾರ."

ಆದರೆ ಆ ಘಟ್ಟ ತಲುಪಲು ಈ ಸೋಪಾನ ಬೇಕು. ಆದ್ದ ರಿಂದ ಪೂಜಿಸುವ ಮೂರ್ತಿಯಲ್ಲಿ ಪರಮಾತ್ಮನ ಆವಿರ್ಭಾವ ವನ್ನು ಕಾಣುತ್ತಾ ಪೂಜಾಕಾರ್ಯದಲ್ಲಿ ತೊಡಗುವ ಆರಾಧಕ ತನ್ನ ಆರಾಧನೆಯ ಗುರಿಯಾದ ಆನಂದಸ್ವರೂಪಿ ಪರಮಾತ್ಮನ ಸಾಕ್ಷಾ ತ್ಕಾರಕ್ಕಾಗಿ ಪ್ರಾಮಾಣಿಕ ಪ್ರಯತ್ನ ನಡೆಸಿದಾಗ, ಭಕ್ತ ಒಂದು ಹೆಜ್ಜೆ ಇಟ್ಟರೆ ಭಗವಂತ ಹತ್ತು ಹೆಜ್ಜೆ ಸಮೀಪ ಬಂದು ತನ್ನ ಕಂದನನ್ನು ಉದ್ಧರಿಸುತ್ತಾನೆ. ಅವನ ಸಮಸ್ತ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ.

❋

ರಾಮ ರಾವಣರ ಯುದ್ಧದ ಸಮಯ. ಕಪಿಸೇನೆ ಸೋಲನ್ನು ಅನುಭವಿಸುತ್ತಿತ್ತು. ಆಗ ರಾಮನು ಒಂದು ಉಪಾಯ ಮಾಡಿದ. ಅವನು ತನ್ನ ದಿವ್ಯಶಕ್ತಿಯಿಂದ ಎರಡೂ ಕಡೆಯ ಸೈನಿಕರನ್ನು ರಾಮನ ರೂಪವಾಗಿ ಪರಿವರ್ತಿಸಿದ. ಕಪಿ ಸೈನಿಕರು ಪರಸ್ಪರ ರಾಮನನ್ನು ನೋಡ ತೊಡಗಿದರು—"ಇವನಿಗೆ ಅವ ರಾಮ, ಅವನಿಗೆ ಇವ ರಾಮ"ನಾದ. ಅವರು ಆನಂದದಿಂದ ಪರಸ್ಪರ ತಬ್ಬಿಕೊಳ್ಳತೊಡಗಿದರು. ಅತ್ತ ರಾಕ್ಷಸ ಸೇನೆಯಲ್ಲಿ ಪರಸ್ಪರರು ತಮ್ಮ ಪರಮಶತ್ರುವಾದ ರಾಮನನ್ನು ನೋಡತೊಡಗಿದರು. ಇದರಿಂದಾಗಿ "ಅವರವರೊಳ್ ಹೊಡೆದಾಡಿ ಹತರಾಗಿ ಹೋದರು." ಇತರರನ್ನು ದಿವ್ಯಭಾವದಿಂದ ನೋಡಿದರೆ ನಮ್ಮ ಜೀವನ ಸಿಹಿಯಾಗುತ್ತದೆ, ಶತ್ರುಭಾವದಿಂದ ನೋಡಿದರೆ ನಮ್ಮನ್ನು ನಾವೇ ನಾಶ ಪಡಿಸಿಕೊಳ್ಳುತ್ತೇವೆ. ವಿವೇಕಾನಂದರ ದೃಷ್ಟಿಯಲ್ಲಿ ಶಿವಜ್ಞಾನದಲ್ಲಿ ಜೀವಸೇವೆಯೇ ನಿಜವಾದ ಪೂಜೆ.

ಸ್ಥಳದಾನ: ಮದ್ರಾಸ್ ಮೋಟಾರ್ಸ್, ಬೆಂಗಳೂರು